# ಸೆಲೆಬ್ರಿಟಿ

■ ಹನಿ

## 'ಉಗ್ರ'ವಾದಿ ಬೇಡಿ

ಕಿರಣ್ ಬೇಡಿ ಯಾರಿಗೆ ಗೊತ್ತಿಲ್ಲ? ಈ ಪಂಜಾಬಿ ಗಟ್ಟಿಗಿತ್ತಿ ಈಗ ಮತ್ತೆ ಸುದ್ದಿಯಲ್ಲಿದ್ದಾರೆ. 'ಐಪಿಸ್ ಹುದ್ದೆ ಪಡೆದ ಭಾರತದ ಮೊದಲ ಮಹಿಳೆ' ಎಂಬ ಹೆಗ್ಗಳಿಕೆಯೊಂದಿಗೆ ಉನ್ನತ ಪೊಲೀಸ್ ಹುದ್ದೆಯಲ್ಲಿ ಇದ್ದಾಗಲೇ ಸುದ್ದಿ-ವಿವಾದಗಳನ್ನು ಸೃಷ್ಟಿಸಿದ ಈಕೆ, ಸ್ವಯಂ ನಿವೃತ್ತಿಯ ಬಳಿಕವೂ ಮಾಧ್ಯಮಗಳ ಕಣ್ಮಣಿಯೇ. ಅಣ್ಣಾ ಹಜಾರೆಯವರು ಭ್ರಷ್ಟಾಚಾರವನ್ನು ಮಟ್ಟ ಹಾಕಲು 'ಜನಲೋಕಪಾಲ್ ಮಸೂದೆ'ಯನ್ನು ದೇಶದ ಮುಂದಿಟ್ಟಾಗ 'ಅಣ್ಣಾ ಪಡೆ'ಯ ಮುಂಚೂಣಿಯಲ್ಲಿ ಇದ್ದಾಕೆ ಕಿರಣ್ ಬೇಡಿ. ಅಣ್ಣಾ ತಂಡದಲ್ಲಿ 'ಸಾಮ್ಯವಾದಿ'ಗಳು ಮತ್ತು 'ಉಗ್ರ'ರ ನಡುವೆ ಭಿನ್ನಮತ ಉಂಟಾಗಿದ್ದಕ್ಕೂ ಈ ಕಿರಣ್ ಬೇಡಿಯ ಉಗ್ರವಾದವೇ ಕಾರಣ ಎನ್ನಲಾಗುತ್ತಿದೆ.

ಸೇವೆಯಲ್ಲಿದ್ದಾಗ ಹಲವು ಶೌರ್ಯ ಪ್ರಶಸ್ತಿಗಳನ್ನು ಗಳಿಸಿರುವ ಕಿರಣ್ ಬೇಡಿಗೆ ಏರ್ ಇಂಡಿಯಾ ಟಿಕೆಟ್‌ನಲ್ಲಿ ಶೇಕಡಾ 75ರಷ್ಟು ಡಿಸ್ಕೌಂಟ್ ಇದೆ. ಇದು ಸರಕಾರದ ಕೊಟ್ಟ ಕಾಣಿಕೆ. ಇತ್ತೀಚೆಗೆ ಈ ಡಿಸ್ಕೌಂಟ್ ಪಡೆದು ವಿಮಾನದಲ್ಲಿ ಕಾರ್ಯಕ್ರಮವೊಂದಕ್ಕೆ ಪ್ರಯಾಣಿಸಿದ ಬೇಡಿ, ಅತ್ತ ಸಂಘಟಕರಿಂದ ಪೂರ್ಣ ಟಿಕೆಟ್‌ನ ಹಣ ಪಡೆದರು ಎಂಬುದು ಇದೀಗ ಹೊಸ ಕಾಂಟ್ರವರ್ಸಿ! 'ಪಡೆದದ್ದು ನಿಜ. ಆದರೆ ಹಾಗೆ ಉಳಿದ ಹಣವನ್ನು ನನ್ನ ವಿಶನ್ ಫೌಂಡೇಶನ್‌ಗೆ ದಾನ ಮಾಡಿದ್ದೇನೆ. ದುರುಪಯೋಗಪಡಿಸಿಕೊಂಡಿಲ್ಲ' ಎನ್ನುವುದು ಬೇಡಿ ವಾದ. 'ಭ್ರಷ್ಟಾಚಾರದ ವಿರುದ್ಧ ಹೋರಾಟ, ಘೋಷಣೆ ಮಾಡುವವರು ಇಂತಹ ಚಿಲ್ಲರೆ ಭ್ರಷ್ಟಾಚಾರ ಮಾಡಬಹುದೆ?' ಎನ್ನುವುದು ಕಾಂಗ್ರೆಸ್ ನಾಯಕರ ಕುಹಕ. ವಾದ-ಪ್ರತಿವಾದ ಭರ್ಜರಿಯಾಗಿ ನಡೆದಿದೆ. ಲೋಕಪಾಲ ಮಸೂದೆ ಹೋರಾಟದಲ್ಲಿ ಆಳುವ ಕಾಂಗ್ರೆಸ್‌ಗೆ ಕಣ್ಣ ಕಸವಾಗಿದ್ದ ಕಿರಣ್ ಬೇಡಿ, ಮುಂದೆಯೂ ಇಂತಹ 'ದಾಳಿ'ಗಳನ್ನು ಎದುರಿಸುವ ಸಾಧ್ಯತೆ ಹೆಚ್ಚಿದೆ.

ಅಮೃತಸರ ಸರಕಾರಿ ಕಾಲೇಜಿನಲ್ಲಿ ಬಿಎ, ಇಂಗ್ಲಿಷ್ ಓದಿ, ಐಪಿಎಸ್ ಪಾಸಾದ ಬೇಡಿ, (ಬರ್ತ್‌ಡೇ 9-6-49) ಡಿಜಿ (ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಬ್ಯೂರೊ) ಹುದ್ದೆಯಲ್ಲಿ ಇದ್ದಾಗಲೇ ಸ್ವಯಂ ನಿವೃತ್ತಿ ಪಡೆದರು. ಆ ಬಳಿಕ ಪೊಲೀಸರ ಕಲ್ಯಾಣದ ಸಲುವಾಗಿ ನವಜ್ಯೋತಿ ಇಂಡಿಯಾ ಫೌಂಡೇಶನ್ ಮತ್ತು ಜೈಲು ಕೈದಿಗಳ ಕಲ್ಯಾಣಕ್ಕಾಗಿ ವಿಶನ್ ಫೌಂಡೇಶನ್ ಸ್ಥಾಪಿಸಿದ್ದಾರೆ. ಸೇವೆಯಲ್ಲಿ ಇದ್ದಾಗ ನ್ಯಾಯಾಂಗ ನಿಂದನೆಯನ್ನೂ ಎದುರಿಸಿದ ಈ ಎದೆಗಾತಿ, ಟೀವಿ ಚಾನೆಲ್‌ನಲ್ಲಿ 'ಆಪ್ ಕಿ ಕಚೇರಿ' ಎಂಬ ಕಾರ್ಯಕ್ರಮ ನಡೆಸಿ, ಪರಸ್ಪರ ಕೋರ್ಟ್ ಮೆಟ್ಟಿಲು ಹತ್ತಿರುವ ಗಂಡ ಹೆಂಡಿರನ್ನು ರಾಜಿ ಮಾಡಿಸಿದ ಖ್ಯಾತಿಯನ್ನೂ ಹೊಂದಿದ್ದಾರೆ.



ಕಾಲೇಜು ದಿನಗಳಲ್ಲಿ ಬೇಡಿ ಖ್ಯಾತ ಲಾನ್ ಟೆನಿಸ್ ಆಟಗಾರ್ತಿ. 1966ರಲ್ಲಿ ಭಾರತದ ಜೂನಿಯರ್ ಟೆನಿಸ್ ಚಾಂಪಿಯನ್. 72ರಲ್ಲಿ ಏಷ್ಯನ್ ಲಾನ್ ಟೆನಿಸ್ ಮತ್ತು 76ರಲ್ಲಿ ಅಖಿಲ ಭಾರತ ಮಹಿಳಾ ಚಾಂಪಿಯನ್ ಕೂಡಾ ಆಗಿದ್ದರು. 22ರ ಹರೆಯಲ್ಲೇ ಏಷ್ಯನ್ ಚಾಂಪಿಯನ್ ಆಗಿದ್ದಬೇಡಿ, ಐಪಿಎಸ್ ಆದದ್ದು ಭಾರತದ ಕ್ರೀಡಾಲೋಕಕ್ಕೆ ನಷ್ಟವೇ. ಆದರೆ ಅದಕ್ಕೂ ಮಿಗಿಲಾದ ಸಾಧನೆಗಳನ್ನು ಐಪಿಎಸ್ ಮೂಲಕ ಮಾಡಿದ ಅವರು 94ರಲ್ಲಿ ಪ್ರತಿಷ್ಠಿತ ಮ್ಯಾಗ್ಸೇಸೆ ಪ್ರಶಸ್ತಿ ಗಳಿಸಿದರು. ಗಂಡ ಬ್ರಿಜ್ ಬೇಡಿ ಬಟ್ಟೆ ಗಿರಣಿ ಯಂತ್ರೋಪಕರಣಗಳ ಫ್ಯಾಕ್ಟರಿ ಹೊಂದಿದ್ದಾರೆ. ಮಗಳು ಸೈನಾ ಕೂಡಾ ಸಾಮಾಜಿಕ ಕಾರ್ಯಕರ್ತೆ. 'ಸಾರ್ವಜನಿಕ ಹೋರಾಟದ ಉಗ್ರವಾದ ಯಾವತ್ತೂ ಒಳ್ಳೆಯದಲ್ಲ' ಎನ್ನುವ ಬಗ್ಗೆ ಸ್ವಲ್ಪ ಅರಿವು ಬೆಳೆಸಿಕೊಂಡರೆ, ಬೇಡಿಯವರು 'ಡಬಲ್ ಫಾಲ್ಟ್' ಗಳಿಲ್ಲದೆ ಯುದ್ಧ ಗೆಲ್ಲಬಲ್ಲರು.



## ದೊರೆಯ ಪ್ರೇಮ

ಹಿಮಾಲಯದ ತಪ್ಪಲಲ್ಲಿರುವ ಪುಟ್ಟ ದೇಶ ಭೂತಾನ್‌ನ ದೊರೆ, ಸಾಮಾನ್ಯ ಪೈಲಟ್ ಒಬ್ಬಳ ಮಗಳನ್ನು ವರಿಸಿದ್ದಾರೆ. ಈಕೆ ಭಾರತದಲ್ಲಿ ಕಾಲೇಜು ಕಲಿಯುತ್ತಿದ್ದ ಕನ್ಯೆಯಾದ್ದರಿಂದ, ಇಲ್ಲೂ ಸುದ್ದಿಯಾಗಿದ್ದಾರೆ. ಜಿಗ್ಮೆ ಕೇಸರ್ ನಾಮ್ಗಿಲ್ ವಾಂಗ್‌ಚುಕ್ ಎಂಬ ಉದ್ದನೆಯ ಹೆಸರಿನ 28ರ ಹರೆಯದ ಈ ಸ್ಫುರದ್ರೂಪಿ ದೊರೆ, 21 ವರ್ಷ ವಯಸ್ಸಿನ ಸುಂದರಿ ಜೆಸ್ಟನ್ ಪೆಮಾಳನ್ನು ರಾಜ ಸಂಪ್ರದಾಯದಂತೆ ವರಿಸಿದ ಬಳಿಕ ಇದೀಗ ಭಾರತಕ್ಕೆ ಬಂದಿದ್ದಾರೆ. ಈ ಜೋಡಿ ಹನಿಮೂನ್‌ಅನ್ನು ದೀಪಾವಳಿಯ ಜತೆಗೇ ರಾಜಸ್ಥಾನದಲ್ಲಿ ಆಚರಿಸುತ್ತಿದೆ.

ಕೇವಲ 7 ಲಕ್ಷ ಜನಸಂಖ್ಯೆಯುಳ್ಳ ಭೂತಾನ್ ಬಗ್ಗೆ ಭಾರತೀಯರಿಗೆ ಹೆಚ್ಚು ಗೊತ್ತಿಲ್ಲ. ಅದಕ್ಕೆ ಆ ದೇಶದ ರಾಜ ಪ್ರಭುತ್ವದ ಮುಚ್ಚಟೆಯೂ ಒಂದು ಕಾರಣ. 1974ರವರೆಗೆ ಈ ದೇಶಕ್ಕೆ ವಿದೇಶೀಯರಿಗೆ ಪ್ರವೇಶವೇ ಇರಲಿಲ್ಲ! ದೇಶಕ್ಕೆ ಟೀವಿ ಬಂದದ್ದು 1999ರಲ್ಲಿ. ಆಕ್ಸ್‌ಫರ್ಡ್ ವಿ.ವಿ ಯಲ್ಲಿ ಓದಿ ಬಂದ ದೊರೆಮಗ ಜಿಗ್ಮೆ, ತಾನೇ ಪಟ್ಟವೇರಿದ ಬಳಿಕ 2008ರಲ್ಲಿ ರಾಜಪ್ರಭುತ್ವಕ್ಕೆ ಮನ್ನಣೆಯೂ ಇರುವ ಹೊಸ ಪ್ರಜಾಪ್ರಭುತ್ವವಾದಿ ಸಂವಿಧಾನವನ್ನು ಜಾರಿಗೆ ತಂದು ಸುಧಾರಣೆ ಶುರು ಮಾಡಿದ್ದಾರೆ. ಈಗಾಗಲೆ ಮೂರು ಸಲ ಭಾರತಕ್ಕೆ ಭೇಟಿ ನೀಡಿರುವ ಈ ದೊರೆಯ ನಾಲ್ಕನೇ ಭೇಟಿ ಹನಿಮೂನ್ ಭೇಟಿಯೂ ಆಗಿದೆ.

'ತಂದೆಯ ತರಹ ನಾನು ನಾಲ್ಕು ಮದುವೆ ಆಗುವುದಿಲ್ಲ; ಒಂದೇ ಮದುವೆ' ಎಂದಿದ್ದಾರೆ ಜಿಗ್ಮೆ. ಸಂಜೆ ವೇಳೆ ಬೈಕ್‌ನಲ್ಲಿ ಊರು ತಿರುಗುತ್ತಾ ಸಾಮಾನ್ಯರ ಜತೆ ಬೆರೆಯುತ್ತಿದ್ದ ಈ ದೊರೆ ಮಗ, ಭಾರತದ ಭೇಟಿಯ ವೇಳೆ ಪ್ರಜಾಪ್ರಭುತ್ವದ ಇನ್ನಷ್ಟು ಪಾಠಗಳನ್ನು ಕಲಿಯಬಹುದು.

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65